


## ಸರ್ಜೋ ಲಿಯೋನೆ

ನಿರ್ದೇಶಕ ಸರ್ಜೋ ಲಿಯೋನೆ (Sergio Leone)ಯದು ದಾಖಲೆಯ ಸಾಧನೆ. ಅವರು ತೆಗೆದ ಬಹುತೇಕ ಸಿನಿಮಾಗಳು ಭರ್ಜರಿ ಯಶಸ್ಸನ್ನು ಕಂಡಿವೆ. ಸಿನಿಮಾ ಕಣಜವಾದ ಐಎಂಡಿಬಿ (IMDB) ಯಲ್ಲಿ ಹತ್ತು ಅಂಕಕ್ಕೆ ಎಂಟಕ್ಕೂ ಹೆಚ್ಚು ಅಂಕಗಳನ್ನು ಅವು ಗಳಿಸಿವೆ. ಕೋಟ್ಯಂತರ ಜನರು ಈ ಸಿನಿಮಾಗಳನ್ನು ನೋಡಿದ್ದಾರೆ. ಅಮೆರಿಕವನ್ನು ನೋಡಿರದ, ಇಂಗ್ಲಿಷ್ ಬಾರದ ಈತನನ್ನು ಅನಂತರ ಹಾಲಿವುಡ್ ತನ್ನಲ್ಲಿಗೆ ಕರೆಸಿಕೊಂಡು, ಎಲ್ಲ ಸವಲತ್ತುಗಳನ್ನೂ, ತಂತ್ರಜ್ಞಾನವನ್ನೂ ಕೊಟ್ಟು ಹೊಸ ಸಿನಿಮಾಗಳನ್ನು ಮಾಡಿಸಿತು. ಆಗ ಮಾಡಿದ 'ಒನ್ಸ್ ಅಪಾನ್ ಎ ಟೈಮ್ ಇನ್ ದ ವೆಸ್ಟ್' ಮತ್ತು 'ಒನ್ಸ್ ಅಪಾನ್ ಅ ಟೈಮ್ ಇನ್ ಅಮೆರಿಕ' – ಎರಡೂ ಯಶಸ್ಸು ಗಳಿಸಿದವು. ಇವರ ಚಿತ್ರ ಬದುಕಿನ ಆರಂಭದಲ್ಲಿ ಬಹು ಪ್ರಮುಖ ನಿರ್ದೇಶಕರ ಜೊತೆ ಕೆಲಸ ಮಾಡಿರುವುದು ಈ ಸಾಧನೆಗೆ ಕಾರಣವಾಗಿರಬಹುದು. ಅವರ ತಂದೆ ವಿನ್‌ಸೆನ್ಜೋ ಲಿಯೋನೆ (vincenzoleone) ಇಟಾಲಿಯನ್ ಸಿನಿಮಾದ ಪೂರ್ವಸೂರಿ. ಜೊತೆಗೆ ಇವರು ತಮ್ಮ ಯೌವನದಲ್ಲಿ ವಿಟ್ಟೋರಿಯೋ ಡಿ ಸಿಕಾ ಅವರ 'ಬೈಸಿಕಲ್ ಥೀಫ್'ಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಇಟಲಿ ದೇಶದ ಕತೆಗಳನ್ನು ಒಳಗೊಂಡ 'ಬೆನ್ ಹರ್' ಮತ್ತು 'ಕೊ ವಾಡೀಸ್' ಚಿತ್ರಗಳಿಗೂ ಸಹಾಯಕ ನಿರ್ದೇಶಕರಾಗಿ ದುಡಿದಿದ್ದಾರೆ. ಆರಂಭದಲ್ಲಿಯೇ ಅವರಿಗೆ ಇಂತಹ ಶಿಕ್ಷಣ ದೊರೆತಿದ್ದರ ಫಲವೇ ಮುಂದಿನ ಅವರ ಯಶಸ್ಸಿಗೆ ಕಾರಣವಾಗಿರಲೂಬಹುದು.

ಈ ಸಿನಿಮಾದಲ್ಲಿ ಮಾತುಗಳು ಕಡಿಮೆಯೇ! ಆದರೆ ಕೆಲವೊಂದು ಮಾತುಗಳು ಜೀವನಪೂರ್ತಿ ನೆನೆಪಿಟ್ಟುಕೊಳ್ಳುವಂತಹ ಗಾದೆ ಮಾತುಗಳಾಗಿ ಮಾರ್ಪಟ್ಟಿವೆ. ಉದಾಹರಣೆಗೆ ಒಂದು ದೃಶ್ಯವನ್ನು ತೆಗೆದುಕೊಳ್ಳಬಹುದು. 'ಅಸಹ್ಯದವ' ಯಾವುದೋ ಊರಿನ, ಬಾಂಬು ಬಿದ್ದು ಹಾಳಾದ ಮನೆಯೊಂದರ ಬಚ್ಚಲು ಮನೆಯಲ್ಲಿರುವ ಸ್ನಾನದ ಡಬರಿ (bath tub) ಯಲ್ಲಿ ಸೋಪಿನ ನೊರೆಯಲ್ಲಿ ಮುಳುಗಿದ್ದಾನೆ. ಈ ವಿಷಯ ಒಬ್ಬ ವೈರಿಗೆ ಗೊತ್ತಾಗುತ್ತದೆ. ಈ 'ಅಸಹ್ಯದವ' ಹಿಂದೊಮ್ಮೆ ಅವನ ಬಲಗೈಯನ್ನು ಕತ್ತರಿಸಿದ್ದಾನೆ. ಆದ್ದರಿಂದ ಇವನನ್ನು ನಿರ್ನಾಮ ಮಾಡಲೆಂದು ಎಡಗೈಯಲ್ಲಿ ಪಿಸ್ತೂಲು ಹಿಡಿದು ಬೆಕ್ಕಿನ ಹೆಜ್ಜೆಗಳನ್ನಿಡುತ್ತಾ ಅವನು ಬರುತ್ತಾನೆ. ಸೀದಾ ಅವನ ಸ್ನಾನದ ಡಬರಿಯ ಮುಂದೆ ಪಿಸ್ತೂಲ್ ಹಿಡಿದು ನಿಲ್ಲುತ್ತಾನೆ. ಸುಲಭವಾಗಿ ಮಿಕವು ಸಿಕ್ಕ ಸಂತೋಷ, ಹೆಮ್ಮೆ ಅವನದು. 'ಈ ಗಳಿಗೆಗಾಗಿ ಎಂಟು ತಿಂಗಳಿನಿಂದ ಕಾಯುತ್ತಿದ್ದೆ. ನನ್ನ ಬಲಗೈಯನ್ನು ನೀನು ಕತ್ತರಿಸಿದ ನಂತರ, ಎಡಗೈನಲ್ಲಿ ಗನ್ ಹಾರಿಸುವುದನ್ನು ಅಭ್ಯಾಸ ಮಾಡಿಕೊಂಡಿರುವೆ. ಈಗ ನಿನ್ನ ಮುಗಿಸುವ ಹೊತ್ತು ಬಂದಿದೆ...' ಎಂದು ಬಿಂಕದಿಂದ ಭಾಷಣ ಶುರು ಮಾಡುತ್ತಾನೆ. ಆದರೆ ಸ್ನಾನದ ಡಬರಿಯ ಸೋಪಿನ ನೊರೆಯೊಳಗೇ ಬಚ್ಚಿಟ್ಟುಕೊಂಡಿದ್ದ ಗನ್‌ನಿಂದ ಈ 'ಅಸಹ್ಯದವ' ರಪರಪನೆ ಶೂಟ್ ಮಾಡಿ ಅವನನ್ನು ಸಾಯಿಸಿ ಬಿಡುತ್ತಾನೆ.